# ಮೆಟಾವರ್ಸ್ ಎಂಗೇಜ್‌ಮೆಂಟ್!

**ತಮಿಳುನಾಡಿನ ಜೋಡಿಯೊಂದು ಮೆಟಾವರ್ಸ್ ಎಂಗೇಜ್‌ಮೆಂಟ್ ಮಾಡಿಕೊಂಡು ಸುದ್ದಿಯಾಗಿದ್ದು, ಸದ್ಯ ಮದುವೆಯನ್ನೂ ಆ ಮೂಲಕವೇ ಮಾಡಿಕೊಳ್ಳುವ ಅಭಿಲಾಷೆ ವ್ಯಕ್ತಪಡಿಸಿದೆ.**





**■ ಶಶಿಕುಮಾರ್ ಸಿ.**

ಫೇಸ್‌ಬುಕ್ ತನ್ನ ಕಾರ್ಪೊರೇಟ್ ಸಂಸ್ಥೆಯ ಹೆಸರನ್ನು ಮೆಟಾ ಎಂದು ನಾಮಕರಣ ಮಾಡಿದ ಬಳಿಕ ಮುನ್ನೆಲೆಗೆ ಬಂದದ್ದೇ ಈ ಮೆಟಾವರ್ಸ್ ಪದ. ವರ್ಚುವಲ್ ಕಲ್ಪನೆಯ ಮುಂದುವರೆದ ಭಾಗವಾದ ಮೆಟಾವರ್ಸ್ ವಿಶ್ವದೆಲ್ಲೆಡೆ ಈಗೀಗ ಸದ್ದು ಮಾಡುತ್ತಿದ್ದು, ಅದಾಗಲೇ ಅದರ ಬಳಕೆ ಭಾರತದಲ್ಲಿ ಚಾಲ್ತಿಗೆ ಬಂದಿದೆ. ಅದೂ ವಿವಾಹ ನಿಶ್ಚಿತಾರ್ಥದ ಸಲುವಾಗಿ ಎಂಬುದು ಇನ್ನೂ ಆಶ್ಚರ್ಯ ಮೂಡಿಸುವಂತಹದ್ದು. ಅದಕ್ಕೆ ವೇದಿಕೆ ಕಲ್ಪಿಸಿದ್ದು ಪಕ್ಕದ ರಾಜ್ಯ ತಮಿಳುನಾಡು.

ಸ್ಟಾರ್ಟ್‌ಅಪ್ ಆಗಿರಲಿ, ಕಾರ್ಪೊರೇಟ್ ಸಭೆ ಸಮಾರಂಭಗಳಾಗಿರಲಿ, ನಿಶ್ಚಿತಾರ್ಥವಾಗಿರಲಿ, ಮದುವೆಯೇ ಆಗಿರಲಿ ಅದರಲ್ಲಿ ವಿಭಿನ್ನತೆ ಬಯಸುವುದು ಈಗಿನ ಯುವ ಸಮೂಹದ ಸಹಜ ಗುಣ. ಅದಕ್ಕೆ ಉದಾಹರಣೆ ತಮಿಳುನಾಡಿನ ಶಿವಲಿಂಗಪುರಂ ಗ್ರಾಮದಲ್ಲಿ ಈಚೆಗೆ ನಡೆದ ಮೆಟಾವರ್ಸ್ ಎಂಗೇಜ್‌ಮೆಂಟ್. ಇದು ದೇಶದ ಮೊದಲ ಮೆಟಾವರ್ಸ್ ಎಂಗೇಜ್‌ಮೆಂಟ್ ಸಹ.

ಶಿವಲಿಂಗಪುರಂನ ಹುಡುಗ ಎಸ್.ಪಿ. ದಿನೇಶ್ ಹಾಗೂ ಹುಡುಗಿ ಜನಗನಂದಿನಿ ರಾಮಸ್ವಾಮಿ ಮೆಟಾವರ್ಸ್ ಮೂಲಕ ನಿಶ್ಚಿತಾರ್ಥ ಮಾಡಿಕೊಂಡವರು. ಐಐಟಿ ಮದ್ರಾಸ್‌ನಲ್ಲಿ ಪ್ರಾಜೆಕ್ಟ್ ಅಸೋಸಿಯೇಟ್ ಆಗಿ ದಿನೇಶ್ ಕೆಲಸ ಮಾಡುತ್ತಿದ್ದರೆ, ಕಾರ್ಪೊರೇಟ್ ಕಂಪನಿಯೊಂದರಲ್ಲಿ ಜನಗನಂದಿನಿ ಸಾಫ್ಟ್‌ವೇರ್ ಡೆವಲಪರ್ ಆಗಿದ್ದಾರೆ.

ಸಮುದ್ರದಾಳದಲ್ಲಿ, ವಿಮಾನದಲ್ಲಿ, ಟ್ರೈನ್‌ನಲ್ಲಿ, ಎತ್ತರದ ಶಿಖರದ ಮೇಲೆ ಎಂಗೇಜ್‌ಮೆಂಟ್, ಮದುವೆ ಮಾಡಿಕೊಂಡು ಸದ್ದು ಮಾಡಿದ್ದನ್ನೇ ಪ್ರೇರಣೆಯಾಗಿಸಿಕೊಂಡ ಈ ಜೋಡಿ ದೇಶದ ಜನ ಈಗಷ್ಟೇ ಅರ್ಥೈಸಿಕೊಳ್ಳುತ್ತಿರುವ ಮೆಟಾವರ್ಸ್ ಪರಿಕಲ್ಪನೆಯನ್ನೇ ಎಂಗೇಜ್‌ಮೆಂಟ್‌ಗೆ ವೇದಿಕೆಯಾಗಿಸಿಕೊಂಡಿದೆ. ಅದಕ್ಕಾಗಿ ಇವರು ಬಳಸಿಕೊಂಡದ್ದು ಇಮ್ಮೆರ್ಸಿವ್ 3ಡಿ (immersive 3D) ತಂತ್ರಜ್ಞಾನ. ಇದು ಮೆಟಾವರ್ಸ್‌ನ ಒಂದು ಭಾಗ. ಅಷ್ಟಕ್ಕೂ ಈ ಜೋಡಿ ತಮ್ಮ ನಿಶ್ಚಿತಾರ್ಥಕ್ಕೆ ಆಯ್ಕೆ ಮಾಡಿಕೊಂಡಿದ್ದು ಹ್ಯಾರಿ ಪಾಟರ್ ಸಿನಿಮಾ ಸರಣಿಯ ಪ್ರಸಿದ್ಧ ಹೌಗರ್ಟ್ ಅರಮನೆಯ ಪ್ರತಿರೂಪವನ್ನು.

ಹ್ಯಾರಿ ಪಾಟರ್ ಕಥೆಗಳಲ್ಲಿರುವಂತೆ ದೊಡ್ಡ ಕಟ್ಟಡಗಳನ್ನು ಡಿಜಿಟಲ್ ಮೂಲಕ ಸೃಷ್ಟಿಸಿ, ತಮ್ಮ ಹಾಗೂ ತಮ್ಮ ಬಂದು ಮಿತ್ರರ ವರ್ಚುವಲ್ ರೂಪಗಳನ್ನು ಸಿದ್ಧಪಡಿಸಿಕೊಂಡು ಆ ರೂಪಗಳ ಮೂಲಕ ಅರಮನೆಯ ಹೊಳಹೊಕ್ಕು ನಿಶ್ಚಿತಾರ್ಥ ಮಾಡಿಕೊಂಡಿದೆ ಈ ಜೋಡಿ. ವರ್ಚುವಲ್ ಹೆಡ್‌ಸೆಟ್ ಧರಿಸಿ ಹಲವರು ಈ ಎಂಗೇಜ್‌ಮೆಂಟ್ ಅನ್ನು ಕಣ್ತುಂಬಿಕೊಂಡಿದ್ದಾರೆ. ಈ ತಂತ್ರಜ್ಞಾನದ ಜವಾಬ್ದಾರಿಯನ್ನು ಹಾಗ್ವಾರ್ಟ್ಸ್ ಸ್ಕೂಲ್ ಆಫ್ ವಿಚ್‌ಕ್ರಾಫ್ಟ್ ಅಂಡ್ ವಿಝಾರ್ಡ್ರಿ (Hogwarts School of Witchcraft and Wizardry) ಸಂಸ್ಥೆಯು ಹೊತ್ತುಕೊಂಡಿತ್ತು.

ಈ ಜೋಡಿಯ ವರ್ಚುವಲ್ ರೂಪವನ್ನು ಅತಿಥಿಗಳ ವರ್ಚುವಲ್ ರೂಪಗಳು ಪರಸ್ಪರ ಭೇಟಿಯಾಗಿ ಶುಭ ಕೋರಿದ್ದಾರೆ. ಜನಗನಂದಿನಿ ಅವರ ತಂದೆ ಮೃತಪಟ್ಟಿದ್ದು, ಅವರ ವರ್ಚುವಲ್ ರೂಪವನ್ನು ಸೃಷ್ಟಿಸಿದ್ದು ವಿಶೇಷವಾಗಿತ್ತು. ಅವರೇ ಮುಂದೆ ನಿಂತು ನಿಶ್ಚಿತಾರ್ಥ ನಡೆಸಿಕೊಟ್ಟರು.

'ತಂತ್ರಜ್ಞಾನಕ್ಕೆ ಸಂಬಂಧಿಸಿದ ಬ್ಲಾಕ್ ಚೈನ್, ಎನ್‌ಎಫ್‌ಟಿ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಾನು ವಿನೂತನ ಪ್ರಯತ್ನಗಳಿಗೆ ಹೆಚ್ಚಾಗಿ ಕೈಜೋಡಿಸುತ್ತೇನೆ. ನಿಶ್ಚಿತಾರ್ಥ ಹಾಗೂ ಮದುವೆ ಎಂಬುದು ನನ್ನ ಜೀವನದ ಮಹತ್ವದ ಘಟ್ಟ. ಅದನ್ನು ಚಿರಸ್ಮರಣೀಯವಾಗಿಸಬೇಕೆಂಬ ಇಚ್ಛೆಯಿಂದ ಮೆಟಾವರ್ಸ್ ನಿಶ್ಚಿತಾರ್ಥಕ್ಕೆ ಮುಂದಾದೆ' ಎನ್ನುತ್ತಾರೆ ದಿನೇಶ್.

'ನಾವು ಟೆಕ್ಕಿಗಳು. ದೈಹಿಕ ಶ್ರಮ ಹಾಕಿ ಮಾಡುವ ಸಾಕಷ್ಟು ಸಮಸ್ಯೆಗಳಿಗೆ ಪ್ರೊಗ್ರಾಮಿಂಗ್ ಭಾಷೆಯ ಮೂಲಕವೇ ಅಂದರೆ ತಂತ್ರಜ್ಞಾನದ ಮೂಲಕವೇ ಪರಿಹಾರ ಕಂಡುಕೊಳ್ಳುತ್ತೇವೆ. ಅದೇ ಮನಸ್ಥಿತಿಯನ್ನು ವೈಯಕ್ತಿಕ ವಿಚಾರಕ್ಕೂ ಅನ್ವಯಿಸಿಕೊಂಡೆ. ಮೆಟಾವರ್ಸ್ ತಂತ್ರಜ್ಞಾನದ ಬಗ್ಗೆ ಪೋಷಕರಿಗೆ ಅರ್ಥ ಮಾಡಿಸುವುದು ತುಂಬ ಕಷ್ಟವಾಗಿತ್ತು. ಅವರಿಗೆ ಇಂಟರ್ನೆಟ್ ಆಗಲಿ ಮೆಟಾವರ್ಸ್ ಆಗಲಿ ಏನೆಂಬುದು ಗೊತ್ತಿಲ್ಲ. ವರ್ಚುವಲ್ ಗೇಮ್‌ಗಳನ್ನು ತೋರಿಸುತ್ತ ವಿವರಿಸಿದ ಬಳಿಕ ಒಪ್ಪಿಕೊಂಡರು' ಎನ್ನುತ್ತಾರೆ.

ಮೆಟಾವರ್ಸ್ ಭವಿಷ್ಯದ ಆಧುನಿಕ ತಂತ್ರಜ್ಞಾನದ ಜಗತ್ತನ್ನು ಸೃಷ್ಟಿಸಲಿದೆ. ಹೀಗೆ ಸೃಷ್ಟಿಯಾಗುವ ಜಗತ್ತು 3ಡಿ ಜಗತ್ತಾಗಿದ್ದು, ಇದರಲ್ಲಿ ಅಡಕವಾಗಿರುವ ಸೆನ್ಸರ್‌ಗಳ ಮೂಲಕ ಜನರು ಸಂವಹನ ನಡೆಸಲು ಸಾಧ್ಯವಾಗುತ್ತದೆ. ಅಂದಹಾಗೆ ಈ ಜೋಡಿ ತಮ್ಮ ವಿವಾಹವನ್ನೂ ಮೆಟಾವರ್ಸ್ ಮೂಲಕವೇ ಮಾಡಿಕೊಳ್ಳಲಿದೆ ಎಂಬುದನ್ನು ಸ್ವತಃ ದಿನೇಶ್ ತಮ್ಮ ಟ್ವಿಟರ್ ಖಾತೆಯ ಮೂಲಕ ಹಂಚಿಕೊಂಡಿದ್ದಾರೆ.

'ದೇಶದ ಮೊದಲ ಮೆಟಾವರ್ಸ್ ವಿವಾಹಕ್ಕೆ ನೋಂದಣಿ ಮಾಡಿಕೊಂಡಿದ್ದೇವೆ. ಟರ್ಡಿವರ್ಸ್ ಮೆಟಾವರ್ಸ್ (TardiVerse Metaverse) ಸ್ಟಾರ್ಟ್‌ಅಪ್‌ನ ಸಹಯೋಗದೊಂದಿಗೆ ಈ ವಿವಾಹ ನಡೆಯಲಿದೆ. ಮೆಟಾವರ್ಸ್ ಟೆಕ್ನಾಲಜಿಯ ಸಹಾಯದೊಂದಿಗೆ ವಿವಾಹವಾಗುತ್ತಿರುವುದಕ್ಕೆ ನಮಗೆ ಹೆಮ್ಮೆಯಾಗುತ್ತಿದೆ' ಎಂದಿದೆ ಈ ಜೋಡಿ. ■

### ಇಮ್ಮೆರ್ಸಿವ್ 3ಡಿ ಎಂದರೇನು?

ಮನುಷ್ಯರ ವರ್ಚುವಲ್ ರೂಪವನ್ನು ರಚಿಸಲು ಬಳಸುವ ತಂತ್ರಜ್ಞಾನವೇ ಇಮ್ಮೆರ್ಸಿವ್ 3ಡಿ. ಕೆಲಸದ ಸ್ಥಳ, ನಮ್ಮ ಸುತ್ತಮುತ್ತಲಿನ ವಾತಾವರಣ ಅಥವಾ ಯಾವುದೇ ಸನ್ನಿವೇಶಕ್ಕೆ ತಕ್ಕಂತೆ ಇಷ್ಟ ಬಂದ ಸ್ಥಳಗಳನ್ನು ವರ್ಚುವಲ್ ಆಗಿ ರೂಪಿಸಿಕೊಂಡು ಅದರಲ್ಲಿ ಮನುಷ್ಯರ ಪ್ರತಿರೂಪಗಳನ್ನು ಸೃಷ್ಟಿಸಿಕೊಂಡು ಅವುಗಳೇ ನಾವಾಗಿ ವರ್ತಿಸುವ ಕ್ರಿಯೆ. ಅದಕ್ಕೆ ತಕ್ಕಂತೆ ವರ್ಚುವಲ್ ಆಗಿ ಬೇರೆಯದ್ದೇ ಆದ ಹಿನ್ನೆಲೆ ಒದಗಿಸಬಹುದು.